ಒಂದಾನೊಂದು ಕಾಲದಲ್ಲಿ ಕಾರ್ಕಳ ಸೀಮೆಯ ಅರಸರಿಗೆ ತಮ್ಮ ಆಳ್ವಿಕೆಯ ಪ್ರದೇಶದ ವ್ಯಾಪ್ತಿಯಲ್ಲಿ ಗೊಮ್ಮಟೇಶ್ವರ ಮೂರ್ತಿಯನ್ನು ಕೆತ್ತಿಸಬೇಕು ಎಂದು ಮನಸ್ಸಾಯಿತು. ಅವರ ಆಸ್ಥಾನದಲ್ಲಿ ಅತ್ಯುತ್ತಮ ಶಿಲ್ಪಕೌಶಲ ಹೊಂದಿದ್ದ ಶಂಭು ಕಲ್ಕುಡ ಮತ್ತು ಅವರ ಮಗನಾದ ಬೀರ ಕಲ್ಕುಡ ಎನ್ನುವ ಶಿಲ್ಪಿಗಳಿದ್ದರು. ಶಂಭು ಕಲ್ಕುಡ ಗತಿಸಿದ ಬಳಿಕ ಬೀರ ಕಲ್ಕುಡನೇ ಎಲ್ಲ ಶಿಲ್ಪ ಕೆಲಸಕಾರ್ಯಗಳನ್ನು ನಿರ್ವಹಿಸುತ್ತಿದ್ದನು. ಗೊಮ್ಮಟೇಶ್ವರನನ್ನು ಕೆತ್ತಿಸಿ, ನಿಲ್ಲಿಸಬೇಕು ಎಂಬ ಅರಸುವಿನ ಮನದಾಶಯವನ್ನು ಕೇಳಿದ ಬೀರ ಕಲ್ಕುಡ ಕೆತ್ತನೆ ಕೆಲಸ ಪ್ರಾರಂಭಿಸಿದ, ಎಲ್ಲರ ನಿರೀಕ್ಷೆಯನ್ನೂ ಮೀರಿ ಕ್ಷಿಪ್ರವಾಗಿ ಕೆತ್ತನೆಯ ಕೆಲಸವನ್ನೂ ಮುಗಿಸಿದ. ಗೊಮ್ಮಟೇಶ್ವರ ಮೂರ್ತಿಯ ಪ್ರತಿಷ್ಠಾಪನೆ ನಡೆದಾಗ ಎಲ್ಲರ ಬಾಯಲ್ಲೂ ಬೀರ ಕಲ್ಕುಡನ ಕೆತ್ತನೆ ಕೌಶಲದ ಶ್ಲಾಘನೆಯ ಮಾತುಗಳೇ. ತನ್ನ ಆಸ್ಥಾನದಲ್ಲಿ ಇಂತಹ ಶಿಲ್ಪಿಯಿರುವುದು ರಾಜನಿಗೂ ಹೆಮ್ಮೆಯ ವಿಷಯ. ಬೆಟ್ಟದ ಮೇಲೆ ವಿರಾಜಮಾನನಾದ ಗೊಮ್ಮಟನ ಸೌಂದರ್ಯ, ಗಾಂಭೀರ್ಯವೂ ಅಪ್ರತಿಮವಾಗಿತ್ತು.

‘ನಿನಗೊಂದು ಸನ್ಮಾನ ಮಾಡಬೇಕಿದೆ, ಆಸ್ಥಾನಕ್ಕೆ ಬಾ’ ಎಂದು ಸತ್ಯ, ಧರ್ಮ, ನೇಮ ನಿಷ್ಠೆಗಳಿಗೆ ಹೆಸರಾಗಿದ್ದ ಬೀರ ಕಲ್ಕುಡನನ್ನು ರಾಜ ತನ್ನ ಆಸ್ಥಾನಕ್ಕೆ ಕರೆಸಿಕೊಂಡ. ವಿನಯಶೀಲನಾಗಿ ರಾಜನ ಆಸ್ಥಾನಕ್ಕೆ ಆಗಮಿಸಿದ ಶಿಲ್ಪಾಚಾರ್ಯನನ್ನು ಸ್ವಾಗತಿಸಿದ ರಾಜ, ಆರಂಭದಲ್ಲಿ ಒಂದೆರಡು ಶ್ಲಾಘನೆಯ ಮಾತುಗಳನ್ನು ಹೇಳಿದನಾದರೂ, ನಂತರದಲ್ಲಿ ಆತನ ವರಸೆಯೇ ಬದಲಾಯಿತು. ‘ಇಂತಹುದೇ ಮೂರ್ತಿಯನ್ನು ನೀನು ಬೇರೆಡೆಯಲ್ಲಿ ಕೆತ್ತುವುದಿಲ್ಲ ಎಂಬ ಖಾತರಿ ಏನು?’ ಎಂದು ಪ್ರಶ್ನಿಸಿದ್ದ. ರಾಜನ ಪ್ರಶ್ನೆ ಕೇಳಿದ ಬೀರ ಕಲ್ಕುಡ ತಬ್ಬಿಬ್ಬಾಗಿ, ಉತ್ತರಿಸಲು ತೊದಲುತ್ತಾನೆ. ಅವನ ಮನಸ್ಸಿನಲ್ಲಿ ಅದುವರೆಗೆ ಅಂತಹದೊಂದು ಯೋಚನೆಯೇ ಸುಳಿದಿರಲಿಲ್ಲ.

ರಾಜನ ಯೋಚನೆ ಬಹುದೂರ ಸಾಗಿತ್ತು. ಆಳ್ವಿಕೆಯ ಸೂತ್ರ ಹಿಡಿದವರ ಅಂತರಂಗವನ್ನು ಬಲ್ಲವರಾರು? ಸೇವಕರನ್ನು ಕರೆದು, ಈ ಶಿಲ್ಪಿಯ ಒಂದು ಕೈ ಮತ್ತು ಒಂದು ಕಾಲನ್ನು ಕಡಿದುಬಿಡಿ ಎಂದು ಕಾರ್ಕಳದ ರಾಜ ಆಜ್ಞಾಪಿಸಿದ.

ಅಪ್ರತಿಮ ಶಿಲ್ಪಿ ಅಂಗವಿಕಲನಾಗಬೇಕಾಯಿತು. ಕುಂಟುತ್ತಲೇ ಪಕ್ಕದ ವೇಣೂರು ಸೀಮೆಗೆ ತೆರಳಿದ. ಅಲ್ಲಿನ ಅರಸರ ಪರಿಚಯವಾಯಿತು. ಅಲ್ಲಿಯೂ ಒಂದು ಗೊಮ್ಮಟ ಮೂರ್ತಿ ಕೆತ್ತುವ ಕೋರಿಕೆ ಎದುರಾಯಿತು. ಬೀರ ಕಲ್ಕುಡ ಹಿಂಜರಿಯಲಿಲ್ಲ. ಒಂದೇ ಕೈಯಲ್ಲಿ, ಮತ್ತೊಂದು ಗೊಮ್ಮಟ ಮೂರ್ತಿಯನ್ನು ಕೆತ್ತಿದ.

ಬೀರ ಕಲ್ಕುಡನ ಬದುಕಿನಲ್ಲಿ ಇಷ್ಟೆಲ್ಲ ನಡೆಯುವ ಸಂದರ್ಭದಲ್ಲಿ ಇತ್ತ, ಮನೆಯಲ್ಲಿ ಅವನ ಪ್ರೀತಿಯ ತಂಗಿ ಕಾಳಮ್ಮ, ಅಣ್ಣನ ಬರುವಿಕೆಗಾಗಿ ಕಾದು ಕಾದು ಸುಸ್ತಾಗಿ ಹೋಗುತ್ತಾಳೆ. ಅರಸರು ಏನು ಸನ್ಮಾನ ಮಾಡಿರಬಹುದು, ತನಗಾಗಿ ಅಣ್ಣ ಏನು ತಂದಿರಬಹುದು ಎಂದು ಆಸೆಯಿಂದ ಕಾದು ದಣಿದ ಅವಳು ಅಣ್ಣನನ್ನು ಹುಡುಕುತ್ತ ಹೊರಡುತ್ತಾಳೆ. ಅವಳ ಹುಡುಕಾಟದ ಸಂದರ್ಭದಲ್ಲಿ ವೇಣೂರು ಬಳಿಯಲ್ಲಿ ಅಣ್ಣನು, ಅತ್ಯಂತ ದಯನೀಯ ಸ್ಥಿತಿಯಲ್ಲಿ ಕಾಣಸಿಗುತ್ತಾನೆ. ಜಗತ್ತಿನಲ್ಲಿಯೇ ಚತುರಶಿಲ್ಪಿ ತನ್ನ ಅಣ್ಣ ಎಂದು ಹೆಮ್ಮೆಯಿಂದ ಬೀಗುತ್ತಿದ್ದ ತಂಗಿಗೆ, ಕಾರ್ಕಳದ ಅರಸರು ಮಾಡಿದ ಮೋಸದ ಅರಿವಾಗಿ ಸಿಟ್ಟಿಗೇಳುತ್ತಾಳೆ. ‘ನಿನ್ನೊಳಗೆ ಇರುವ ಶಕ್ತಿಯನ್ನು ಅರಿತುಕೋ ಅಣ್ಣಾ’ ಎನ್ನುತ್ತ, ಅಣ್ಣನ ಆತ್ಮವಿಶ್ವಾಸವನ್ನು ಬಡಿದೆಬ್ಬಿಸುತ್ತಾಳೆ. ಅಷ್ಟರಲ್ಲಿ ಅವರೊಳಗಿರುವ ದೈವೀಶಕ್ತಿಯ ಕುರಿತು ಅಶರೀರವಾಣಿ ಮೊಳಗುತ್ತದೆ. ಅನ್ಯಾಯದ ಹಾದಿ ಹಿಡಿದ ಅರಸನಿಗೆ ಬುದ್ಧಿ ಕಲಿಸಬೇಕು ಎಂದು ಅಣ್ಣ ತಂಗಿಯರು ನಿರ್ಧರಿಸಿ, ಮಹಾಲಿಂಗೇಶ್ವರ ದೇವಸ್ಥಾನದ ಬಾವಿಗೆ ಹಾರುತ್ತಾರೆ. ಆ ಬಾವಿಯಿಂದ ಕಲ್ಕುಡ ಮತ್ತು ಕಲ್ಲುರ್ಟಿ ಎಂಬ ದೈವಗಳು ಉದ್ಭವಿಸಿ ಬರುತ್ತಾರೆ. ಕಾರ್ಕಳದ ಅರಸರಿಗೆ ಅನೇಕ ವಿಧಗಳಲ್ಲಿ ತೊಂದರೆಗಳನ್ನು ಕೊಡುತ್ತ, ಕೊನೆಗೆ ಅರಸನು ತನ್ನ ತಪ್ಪನ್ನು ತಿದ್ದಿಕೊಂಡು ನ್ಯಾಯದ ಹಾದಿಯಲ್ಲಿ ನಡೆಯುವುದಾಗಿ ಒಪ್ಪಿಕೊಳ್ಳುತ್ತಾನೆ. ಹೀಗೆ ‘ಕಲ್ಕುಡ ಕಲ್ಲುರ್ಟಿ’ ಎಂಬ ಅಣ್ಣ ತಂಗಿ ದೈವಗಳು ಸೃಷ್ಟಿಯಾಗಿ, ತುಳುನಾಡಿನಲ್ಲಿ ಸತ್ಯದ ರಕ್ಷಣೆಗೆ ಬದ್ಧರಾಗಿ ನಿಲ್ಲುತ್ತಾರೆ. ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ಕಲ್ಕುಡ ಕಲ್ಲುರ್ಟಿ ದೈವಗಳಿಗೆ ಈಗಲೂ ಆರಾಧನೆ ಸಲ್ಲುತ್ತದೆ.

ಸತ್ಯ ಮತ್ತು ಮಾನವೀಯವಾದ ಧರ್ಮದ ಮಾರ್ಗದಲ್ಲಿ ಮನುಷ್ಯರು ನಡೆಯುವಂತೆ ಮಾಡುವ ಮೂಲಕ, ಎಲ್ಲರಿಗೂ ಬದುಕುವ ಹಕ್ಕನ್ನು ಕಲ್ಪಿಸುವ ಸಮಷ್ಟಿ ಪ್ರಜ್ಞೆಯನ್ನು ಬೆಳೆಸುವ ನಿಟ್ಟಿನಲ್ಲಿ ದೈವಾರಾಧನೆಯು ಪುರಾತನ ಕಾಲದಿಂದಲೂ ನಡೆದು ಬಂದಿದೆ. ಈಗಿನ ಕೇರಳದ ನೀಲೇಶ್ವರದಿಂದ ಹಿಡಿದು, ಅತ್ತ ತಮಿಳುನಾಡಿನ ರಾಮೇಶ್ವರದವರೆಗೂ ದೈವಾರಾಧನೆ ನಡೆಯುತ್ತಿತ್ತು ಎಂಬ ಉಲ್ಲೇಖ ಪಾಡ್ದನಗಳಲ್ಲಿದೆ. ಅಂದಹಾಗೆ, ದೈವಾರಾಧನೆಯ ಉಸಿರಿರುವುದೇ ಈ ಪಾಡ್ದನಗಳಲ್ಲಿ. ದೈವಗಳ ಹಿನ್ನೆಲೆ, ಆಚರಣೆಗಳ ವಿವರಗಳು, ಪ್ರತಿಯೊಂದು ದೈವವು ಎತ್ತಿಹಿಡಿದ ಸತ್ಯದ ಆಶಯಗಳೇನು ಎಂಬುದನ್ನು ಪಾಡ್ದನಗಳು ಹೇಳುತ್ತವೆ. ಸಾವಿರ ಸಾವಿರ ಸಂಖ್ಯೆಯಲ್ಲಿ ಬಾಯ್ದೆರೆಯಾಗಿಯೇ ತಲೆಮಾರಿನಿಂದ ತಲೆಮಾರಿಗೆ ಸಾಗಿ ಬಂದಿರುವ ಪಾಡ್ದನಗಳು ಇತ್ತೀಚೆಗಿನ ಕೆಲವು ದಶಕಗಳಲ್ಲಿ ಮರೆಯಾಗಲಾರಂಭಿಸಿದವು. ಕೃಷಿ ಬದುಕಿನೊಂದಿಗೆಯೇ ತಳುಕು ಹಾಕಿಕೊಂಡಿರುವ ದೈವಾರಾಧನೆ ಪದ್ಧತಿಯು, ಬಿಳಿಕಾಲರಿನ ಉದ್ಯೋಗಗಳು ವ್ಯಾಪಿಸಿದಂತೆಯೇ, ಕೃಷಿ ನಾಶವಾದಂತೆಯೇ, ಮರೆತುಹೋಗಲಾರಂಭಿಸಿದವು. ದಾಖಲೀಕರಣ ಪ್ರಕ್ರಿಯೆ, ಅಲ್ಲಲ್ಲಿ ಪಾಡ್ದನಗಳನ್ನು ಹೇಳುವ ಕಲಾವಿದರ ದೆಸೆಯಿಂದಲಾಗಿ, ಕರಾವಳಿಯಲ್ಲಿ ಅವು ಉಳಿದುಕೊಂಡಿವೆ.

ಸತ್ಯ–ಧರ್ಮದ ಪರವಾಗಿ ನಿಂತು ಹೋರಾಟ ಮಾಡಿದ ವ್ಯಕ್ತಿಗಳು ಶಕ್ತಿಗಳಾಗಿ ದೈವರೂಪವನ್ನು



## ಪಾಡ್ದನಗಳೆಂಬ ತುಳುನಾಡಿನ ಮೂಲಸ್ರೋತ

ದೈವಾರಾಧನೆಯ ಪರಿಕಲ್ಪನೆಯ ಮೂಲಸ್ರೋತವೇ ಪಾಡ್ದನಗಳು. ಇವು ತುಳುನಾಡಿನ ಅಂತರಂಗವಿದ್ದಂತೆ. ಜಾತಿ, ಧರ್ಮಗಳ ಭೇದವಿಲ್ಲದ ನೂರಾರು ದೈವಗಳ ಪಾಡ್ದನಗಳು ತುಳುನಾಡಿನಲ್ಲಿವೆ. ತುಳುಭಾಷಾಲೋಕದ ಅಪಾರ ಸಾಧ್ಯತೆಗಳು ಈ ಪಾಡ್ದನವೆಂಬ ಮಹಾಕಾವ್ಯಗಳಲ್ಲಿ ಅಡಗಿವೆ. ತುಳುನಾಡಿನ ಆಚರಣೆ, ಆಚಾರ ವಿಚಾರ, ಇತಿಹಾಸವನ್ನೂ ತಿಳಿಸಬಲ್ಲ ಪಾಡ್ದನಗಳು ತುಳುವ ಲೋಕದ ಪುರಾಣಗಳೆಂದರೂ ತಪ್ಪಲ್ಲ. ಅದು ತಲೆಮಾರಿನಿಂದ ತಲೆಮಾರಿಗೆ ಬಾಯ್ದೆರೆಯಾಗಿ ಬಂದ ಕಾರಣ ಚಲನಶೀಲವಾಗಿ ಆಯಾ ಕಾಲದ ಇತಿಹಾಸವನ್ನು ಪೋಣಿಸಿಕೊಂಡು ಮುಂದುವರೆದಿದೆ. ಅದೇ ಕಾರಣಕ್ಕಾಗಿ